ಅಧ್ಯಕ್ಷರು : ರಾಜೇಂದ್ರನ್ ಗೈರುಹಾಜರಿ ಇದ್ದಾರೆ. ನಾನು ಸೆಕೆಂಡ್ ರೌಂಡ್ ಯಾರನ್ನೂ ಕರೆಯುವುದಿಲ್ಲ. ಏಕೆಂದರೆ ಸ್ವಲ್ಪ ಸಮಯ ಇವತ್ತು ಕಳೆದಿದೆ. ಶ್ರೀ ರಾಮರೆಡ್ಡಿಯವರೇ, ನಿಮ್ಮ ಪ್ರಶ್ನೆಗೆ (ಪ್ರಶ್ನೆ ಸಂಖ್ಯೆ : 2386) ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಹದಿನೈದು ದಿವಸ ಟೈಮ್ ಕೇಳಿದರೆ ಸದನ ಮುಗಿದುಹೋಗುತ್ತದೆ.

ಅಧ್ಯಕ್ಷರು : ಏನು ಮಾಡುವುದಕ್ಕೆ ಆಗುತ್ತದೆ? ಅವರು ಸಮಯ ಕೇಳಿದಾಗ ನಾನು ಅವಕಾಶ ಕೊಡಲೇಬೇಕಾಗುತ್ತದೆ. ಈಗ ಪುಟ್ಟಣ್ಣಯ್ಯನವರ ಪ್ರಶ್ನೆ. ಶ್ರೀ ಶ್ರೀರಾಮರೆಡ್ಡಿಯವರೇ ನೀವು ಆ ಪ್ರಶ್ನೆಯನ್ನು ಕೇಳಬಹುದು.

ಮೈಸೂರಿನಲ್ಲಿ ಕುವೆಂಪು ಸ್ಮಾರಕ ಭವನದ ನಿರ್ಮಾಣ

375 - ಶ್ರೀ. ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಶ್ವ ಮಾನವ ಸಂದೇಶವನ್ನು ಸಾರಿದ ರಾಷ್ಟ್ರಕವಿ ಕುವೆಂಪುರವರ ಸ್ಮಾರಕ ಭವನವನ್ನು ನಿರ್ಮಾಣ ಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸಿದ್ದಾರೆಯೇ?*

ಆ) *ಹಾಗಿದ್ದಲ್ಲಿ ಇದನ್ನು ಯಾವಾಗ ಮತ್ತು ಎಲ್ಲಿ ನಿರ್ಮಾಣ ಮಾಡಲಾಗುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು) :

ಅ) ಹೌದು.

ಆ) 1992 ರಲ್ಲಿ ಕುವೆಂಪು ಅವರ ಜನ್ಮ ಸ್ಥಳವಾದ ಚಿಕ್ಕಮಗಳೂರು ಜಿಲ್ಲೆ ಹಿರೆಕೊಡಿಗೆಯಲ್ಲಿ ನಿರ್ಮಿಸಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅವರ ಹುಟ್ಟೂರಿನಲ್ಲಿ ಕುವೆಂಪು ಅವರ ಸ್ಮಾರಕಭವನವನ್ನು 1992ರಲ್ಲಿ ಕಟ್ಟಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ನಮ್ಮ ಪ್ರಶ್ನೆ ಇರತಕ್ಕಂಥಾದ್ದು ಏನೆಂದರೆ, ಕುವೆಂಪು ಅವರನ್ನು ದಯವಿಟ್ಟು ಅಲ್ಲಿಗೇ ಸೀಮಿತ ಮಾಡಬೇಡಿ. ಕುವೆಂಪು ಅವರ ಬಗ್ಗೆ ವಿವರವಾಗಿ ಹೇಳಿ ಭಾಷಣ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಅವರ ಕರ್ಮಭೂಮಿ ಮೈಸೂರು ಆಗಿತ್ತು. ಅವರ ಜೀವನದ ಕೊನೆಯುಸಿರು ಬಿಟ್ಟಿದ್ದು ಮೈಸೂರಿನಲ್ಲಿ. ಹೀಗಾಗಿ ಮೈಸೂರಿನಲ್ಲಿ ಒಂದು ಭವ್ಯವಾದಂಥ ಸ್ಮಾರಕ ಭವನವನ್ನು ಕುವೆಂಪು ಅವರ ಜ್ಞಾಪಕಾರ್ಥವಾಗಿ ಕಟ್ಟಬೇಕು ಎನ್ನತಕ್ಕಂಥಾದ್ದು ನಮ್ಮ ಪ್ರಶ್ನೆಯಾಗಿ ಇರತಕ್ಕಂಥಾದ್ದು. ದಯಮಾಡಿ ಸರ್ಕಾರ ಇದರ ಬಗ್ಗೆ ಏನಾದರೂ ಆಲೋಚನೆ ಮಾಡಿದೆಯೇ? ಮೈಸೂರಿನಲ್ಲಿ ಒಂದು ಭವ್ಯವಾದಂಥ ಸ್ಮಾರಕ ಭವನವನ್ನು ಕುವೆಂಪು ಅವರ

ಜ್ಞಾಪಕಾರ್ಥವಾಗಿ ಕಟ್ಟಬೇಕು ಎನ್ನತಕ್ಕಂಥಾದ್ದು ನಮ್ಮ ಒತ್ತಾಯ ಇದೆ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಈಗಾಗಲೇ ರಾಷ್ಟ್ರಕವಿಗಳಾದಂಥ ಕುವೆಂಪು ಅವರ ಎರಡು ಸ್ಥಳಗಳಲ್ಲಿ ಅವರ ಸ್ಮಾರಕಗಳ ಬಗ್ಗೆ ಸರ್ಕಾರ ಬಹಳ ಮುತುವರ್ಜಿ ವಹಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವರ ತಾಯಿಯವರ ತೌರೂರಾದ ಚಿಕ್ಕಮಗಳೂರಿನ ಬಳಿ ಇರುವ ಹಿರೇಕೊಡಿಗೆಯಲ್ಲಿ ಒಂದುಸ್ಮಾರಕ ಭವನವನ್ನು ನಿರ್ಮಾಣ ಮಾಡಿ ಅಲ್ಲಿ ಕುವೆಂಪುರವರ ಗ್ರಂಥಾಲಯ ತೆರೆದು, ಅವರ ಪ್ರತಿಮೆಯನ್ನೂ ಕೂಡ ಸ್ಥಾಪಿಸಲಾಗಿದೆ. ಕುವೆಂಪು ಅವರ ಊರಾದ ಕುಪ್ಪಳಿಯೊಳಗೆ ಈ ವಿಷಯವಾಗಿ ಕುವೆಂಪು ಪ್ರತಿಷ್ಠಾನಕ್ಕೆ ಈಗಾಗಲೇ ಸರ್ಕಾರ 58 ಲಕ್ಷ ರೂಪಾಯಿಗಳನ್ನು ಸಹಾಯಧನವಾಗಿ ಕೊಟ್ಟು ಆ ಕಾರ್ಯ ಪ್ರಗತಿಪರದಲ್ಲಿದೆ. ಅವರ ಮನೆಯನ್ನು ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರವನ್ನಾಗಿ ಪರಿಗಣಿಸಲು ಉದ್ದೇಶಿಸಲಾಗಿದೆ. ಇದೂ ಅಲ್ಲದೆ, ಕವಿಶೈಲದಲ್ಲಿರುವ ಕುವೆಂಪು ಅವರ ಸಮಾಧಿ ಸ್ಥಳವನ್ನು ಸ್ಮಾರಕವಾಗಿ ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗಿದೆ. ಇವತ್ತು ಪುಟ್ಟಣ್ಣಯ್ಯನವರ ಪ್ರಶ್ನೆ ಎಂದರೆ, ಇದು ಒಂದು ತಾಯಿಯ ಊರು ಆಯಿತು, ಎರಡು ತಂದೆಯ ಊರಾಯಿತು. ಆದರೆ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಮೈಸೂರಿನಲ್ಲಿ ಸ್ಮಾರಕ ಭವನ ಕಟ್ಟಬೇಕೆಂದು ಏನು ಹೇಳುತ್ತಿದ್ದಾರೆ, ಮೈಸೂರಿನಲ್ಲೇನೇ ಸ್ಮಾರಕವಾಗಬೇಕೆಂದು ಅದರ ಬಗ್ಗೆ ನಾವೇನೂ ಚಿಂತನೆ ಮಾಡಿಲ್ಲ ಸ್ವಾಮಿ. ಅದೇನಾದರೂ ವಿಷಯ ಬಂದಾಗ ಪರಿಶೀಲಿಸುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೈಸೂರು ಕುವೆಂಪು ಅವರ ಕರ್ಮಭೂಮಿ. ಅವರು ತಮ್ಮ ಕೊನೆಯುಸಿರನ್ನು ಎಳೆದದ್ದು ಮೈಸೂರಿನಲ್ಲಿ. ಹಾಗಾಗಿ ಮೈಸೂರು ಕರ್ನಾಟಕ ರಾಜ್ಯದ ಸಾಂಸ್ಕೃತಿಕ ಕೇಂದ್ರ, ರಾಜಧಾನಿಯಾಗಿದೆ. ಆದ್ದರಿಂದ ಮೈಸೂರಿನಲ್ಲೇ ಇದನ್ನು ಕಟ್ಟಬೇಕು ಎನ್ನತಕ್ಕಂಥಾದ್ದು ನಮ್ಮ ಒತ್ತಾಯ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಕನ್ನಡ ಅಧ್ಯಯನ ಸಂಸ್ಥೆಯನ್ನು ಕುವೆಂಪು ಅವರ ಹೆಸರಿನಲ್ಲಿ ಮೈಸೂರಿನಲ್ಲಿ ಹಮ್ಮಿಕೊಂಡಿದ್ದೇವೆ. ವಿಶೇಷವಾಗಿ ಅಧ್ಯಯನ ಸಂಸ್ಥೆ ಅವರ ಹೆಸರಿನಲ್ಲಿಯೇ ಮೈಸೂರಿನಲ್ಲಿ ನಡೆಯುತ್ತಿದೆ.

(ಗೊಂದಲ)

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಕುವೆಂಪು ಅವರನ್ನು ಹೊಗಳುತ್ತೀರಿ, ಹಾಡುತ್ತೀರಿ.....

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಕುವೆಂಪು ಅವರ ಬಗ್ಗೆ ಅವರಿಗಷ್ಟೇ ಅಭಿಮಾನವಲ್ಲ, ಕನ್ನಡ ದೇಶದ ಎಲ್ಲರಿಗೂ ಇದೆ. ಕುವೆಂಪು ಅವರನ್ನು ಮೈಸೂರಿಗೆ ಮಾತ್ರ ಸೀಮಿತ ಮಾಡಬೇಡಿ. ಅವರು ರಾಷ್ಟ್ರಕವಿಗಳು.....

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಅಧ್ಯಯನ ಕೇಂದ್ರ ಬೇರೆ, ಸ್ಮಾರಕ ಭವನ ಬೇರೆ ದಯವಿಟ್ಟು ನೀವು ಅದನ್ನೂ ಇದನ್ನೂ ಒಂದೇ ಮಾಡಬೇಡಿ.

ಶ್ರೀ ಅಗರ ಜ್ಞಾನೇಂದ್ರ : ಮಾನ್ಯ ಮಂತ್ರಿಗಳು ತಪ್ಪು ಉತ್ತರ ಹೇಳಿದ್ದಾರೆ. ರೆಕಾರ್ಡ್ ಸರಿಮಾಡುವ ದೃಷ್ಟಿಯಿಂದ ನಾನು ಒಂದು ಮಾತನ್ನು ಹೇಳುತ್ತಿದ್ದೇನೆ. ಕುವೆಂಪು ಹುಟ್ಟಿದ ಊರು ಹಿರೆಕೊಡಿಗೆಯಲ್ಲಿ ಒಂದು ಲೈಬ್ರರಿಯನ್ನು ಸ್ಥಾಪನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಲ್ಲಿ ಅದೇನೂ ಸ್ಥಾಪನೆ ಮಾಡಿಲ್ಲ. ಒಂದು ವಿಗ್ರಹ ಇದೆ. ಒಂದು ಚಿಕ್ಕದಾಗಿ ಇರತಕ್ಕಂಥ ಮಂಟಪ ಇದೆ. ಅಲ್ಲಿ ಹೇಳುವವರು ಕೇಳುವವರು ಯಾರೂ ಕೂಡ ಇಲ್ಲ. ಪಕ್ಕದಲ್ಲೇ ಗೊಬ್ಬರ ಗುಂಡಿ ಇದೆ. ಅದನ್ನು ಏನಾದರೂ ಮಾಡಿ ಸರಿ ಮಾಡಿ...

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಪಂಚಾಯತಿಯವರು ಅದನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದು ತಪ್ಪು ಉತ್ತರ ಏನೂ ಅಲ್ಲ....

ಅಧ್ಯಕ್ಷರು : ಅದನ್ನು ಬರೇ ಸರ್ಕಾರಕ್ಕೇ ಹೇಳಬೇಕಾ? ಆ ಊರಿನವರಿಗೆ ಅವರ ಬಗ್ಗೆ ಗೌರವ ಬೇಡವೆ? ಪಕ್ಕದಲ್ಲೇ ಗೊಬ್ಬರ ಗುಂಡಿ ಇದೆ ಎಂದರೆ ಆ ಮಹಾನುಭಾವ ಹುಟ್ಟಿದ ಊರಿನವರಿಗೆ ಲಜ್ಜೆ ಬೇಡವೆ? ಈ ದೇಶದಲ್ಲಿ ಎಲ್ಲಾ ಹೀಗೆಯೇ ಆಗಿದೆ. ಸ್ಕೂಲ್ ಕಟ್ಟಿಸಿದರೆ, ಸ್ಕೂಲ್ ಪಕ್ಕದಲ್ಲೇ ತಿಪ್ಪೆ ಹಾಕುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಗೊಬ್ಬರ ಗುಂಡಿಯಲ್ಲಿ.....

ಅಧ್ಯಕ್ಷರು : ಸರ್ಕಾರ ಮಾಡಬೇಕು, ನಿಜ. ಜನರಿಗೆ ಕೂಡ ಹೆಮ್ಮೆ ಇರಬೇಕು. ಕುವೆಂಪು ಅವರು ಹುಟ್ಟಿದ ಊರು ಎನ್ನತಕ್ಕಂಥ ಹೆಮ್ಮೆ ಇರಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅವರ ಒಂದು ಹೆಸರಿನಲ್ಲಿ ಒಂದು ವಿಗ್ರಹ ಸ್ಥಾಪನೆ ಮಾಡಿದ್ದಾರೆ ಮತ್ತು ಜಿಲ್ಲಾ ಪಂಚಾಯತ್‌ನವರು ಅದನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ತಪ್ಪು ಏನಿದೆ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮೈಸೂರಿನ ಬಗ್ಗೆ ಹೇಳಿ.

(ಗೊಂದಲ)

ಅಧ್ಯಕ್ಷರು : ಆಯಿತಮ್ಮ ದಯಮಾಡಿ ಕುಳಿತುಕೊಳ್ಳಿ. ನಾನು ಬೇರೆ ಪ್ರಶ್ನೆಗೆ ಹೋಗಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮೈಸೂರು ಬಗ್ಗೆ ಹೇಳುವುದಾದರೆ ಅಧ್ಯಯನ ಸಂಸ್ಥೆ ಮಾಡಿದ್ದೇವೆ. ರಾಷ್ಟ್ರಕವಿ ಕುವೆಂಪು ಬರೇ ಮೈಸೂರಿಗೇ ಸೀಮಿತ ಆಗಿಲ್ಲ. ಅವರು ಕರ್ನಾಟಕದಲ್ಲಿ ಅಷ್ಟೇ ಅಲ್ಲ, ನಮ್ಮ ರಾಷ್ಟ್ರದ ಒಬ್ಬ ಹಿರಿಯ ಕವಿ. ಅವರ ಬಗ್ಗೆ ತಮಗೆ ಇರತಕ್ಕಂಥ ಕಳಕಳಿ ಕರ್ನಾಟಕದ ಎಲ್ಲಾ ಜನತೆಗೂ ಇದೆ. ರಾಷ್ಟ್ರದ ಜನತೆಗೆ ಇದೆ ಎನ್ನತಕ್ಕಂಥಾದ್ದನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಬರೀ ನಾಲ್ಕು ಮಾತಿನಲ್ಲಿ ಪುಟ್ನಂಜಿ-ಬಾಯಿ ತುಂಬಾ ಅಪರಂಜಿ-ಎಂದು ಆಗಿಬಿಟ್ಟರೆ ಆಗುವುದಿಲ್ಲ. ಸರಿಯಾಗಿ ಹೇಳಬೇಕು. ಹೇಳುವಾಗ ಕುವೆಂಪು ಅವರ ಬಗ್ಗೆ ಕಠಿಣವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ನಿರ್ದಾಕ್ಷಿಣ್ಯವಾದ ಉತ್ತರ ಬರಬೇಕು ಇಲ್ಲಿ.....

ಬೆಳಗಾವಿ ಪ್ರವಾಸಿ ಮಂದಿರ/ ಸರ್ಕೀಟ್ ಹೌಸಿಗೆ ವಿದ್ಯುತ್ ಪೂರೈಕೆ

378- ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಪ್ರವಾಸಿ ಮಂದಿರ ಸರ್ಕೀಟ್ ಹೌಸ್‌ಗಳ ಕೊಠಡಿಗಳ ಸಂಖ್ಯೆ ಎಷ್ಟು?

ಆ) ಸದರಿ ಪ್ರವಾಸಿ ಮಂದಿರದಲ್ಲಿ ಕೊಠಡಿಗಳ ಸುಣ್ಣ ಬಣ್ಣ ಬಳಿಯದೇ ವಿದ್ಯುತ್ ಉಪಕರಣಗಳ ಜೋಡಣೆ ಸರಿಯಾಗಿಲ್ಲದೇ ಕೆಟ್ಟು ಹೋಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಪ್ರವಾಸಿ ಮಂದಿರದ ಕೊಠಡಿಗಳ ಅತಿಥಿಗಳಿಗೆ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಇಲ್ಲದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರದ ಈ ಬಗ್ಗೆ ಕೂಡಲೇ ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರವಾಸಿ ಮಂದಿರದಲ್ಲಿ ಹತ್ತು : ಸರ್ಕೀಟ್ ಹೌಸ್‌ನಲ್ಲಿ ಒಂಭತ್ತು ಕೊಠಡಿಗಳಿವೆ.

ಆ) ಹೌದು. ಆದರೂ ಸಹ ಲಭ್ಯವಿರುವ ಅನುದಾನದಲ್ಲಿ ದುರಸ್ಥಿ ಮಾಡಲಾಗಿದೆ.

ಇ) ಕಳೆದ ವರ್ಷದಲ್ಲಿ ಸಾಕಷ್ಟು ಮಳೆ ಬಾರದಿದ್ದ ಏಪ್ರಿಲ್ 98 ರಿಂದ ಮೂರು ದಿನಗಳಿಗೊಮ್ಮೆ ಪ್ರವಾಸಿ ಮಂದಿರ : ಸರ್ಕೀಟ್ ಹೌಸ್‌ಗಳಿಗೆ ನೀರು ಸರಬರಾಜು ಆಗುತ್ತಿದೆ.

ಈ) ಎರಡು ಕೊಳವೇ ಬಾವಿಗಳನ್ನು ಕೊರೆಯಲಾಗಿದೆ. ಅವಶ್ಯಕವಿದ್ದಲ್ಲಿ ಟ್ಯಾಂಕರ್‌ಗಳಿಂದ ನೀರು ಪಡೆಯಲಾಗುತ್ತಿದೆ.

ಶ್ರೀ ಹೆಚ್.ಡಿ. ಬಸವರಾಜು : ಸಭಾಧ್ಯಕ್ಷರೇ, ಬೆಳಗಾವಿ ಪ್ರವಾಸಿ ಮಂದಿರದ ಬಗ್ಗೆ ಪ್ರಶ್ನೆ ಕೇಳಿದ್ದೆ. ಅಲ್ಲಿ ಸುಣ್ಣಬಣ್ಣ ಬಳಿಯದೇ ವಿದ್ಯುತ್ ಉಪಕರಣಗಳ ಜೋಡಣೆ ಸರಿಯಾಗಿಲ್ಲದೆ ಕೆಟ್ಟುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಿದ್ದಕ್ಕೆ ಅವರು ಕೊಟ್ಟಿರುವ ಉತ್ತರದಲ್ಲಿ 'ಲಭ್ಯವಿರುವ ಅನುದಾನದಲ್ಲಿ ದುರಸ್ತಿ ಮಾಡಲಾಗಿದೆ' ಎಂದು ಹೇಳಿದ್ದಾರೆ. ನಾನು ಒಂದೇ ಒಂದು ನಿರ್ದಿಷ್ಟವಾದಂಥ ಪ್ರಶ್ನೆಯನ್ನು ಕೇಳುತ್ತೇನೆ. ಸುಣ್ಣ, ಬಣ್ಣ ಮತ್ತು ಏನೇನು